

## ನಾವು ಕೆಮ್ಮೋದಿಲ್ಲ

ಸಾಲು ಸಾಲು ಅತ್ಯಾಚಾರ–ಹತ್ಯೆ ಪ್ರಕರಣಗಳು, ಎನ್‌ಕೌಂಟರ್ ಹೆಸರಿನಲ್ಲಿ ನಡೆದ ಹತ್ಯೆಗಳು, ಪೌರತ್ವ (ತಿದ್ದುಪಡಿ) ಕಾಯ್ದೆಯ ವಿರುದ್ಧ ದೇಶದ ಹಲವೆಡೆ ಹೊತ್ತಿಕೊಂಡಿರುವ ಪ್ರತಿಭಟನೆಯ ಕಿಚ್ಚು, ವಿದ್ಯಾರ್ಥಿಗಳ ಮೇಲೆ ಪೊಲೀಸರ ದೌರ್ಜನ್ಯ ಇವೆಲ್ಲವೂ ಪ್ರಜ್ಞಾವಂತರನ್ನು, ಸೃಜನಶೀಲ ಮನಸ್ಸುಗಳನ್ನು ಚಿಂತೆಗೆ ದೂಡಿದೆ. ಬಾಲಿವುಡ್, ತಮಿಳು, ತೆಲುಗು ಸಿನಿಮಾಕರ್ತರು, ಸ್ಟಾರ್ ನಟರುಗಳೆಲ್ಲ ಈ ಕುರಿತು ತಮ್ಮ ಪ್ರತಿಭಟನೆಯನ್ನು ಗಟ್ಟಿಯಾಗಿ ದಾಖಲಿಸಿದ್ದಾರೆ. ಆದರೆ ಚಂದನವನದ ಘಟಾನುಘಟಿಗಳೆಲ್ಲ ಇನ್ನೂ 'ಮೌನವೇ ಆಭರಣ' ಎಂದು ಗುನುಗಿಕೊಳ್ಳುತ್ತ ತೆಪ್ಪಗಿದ್ದಾರೆ. ಎ,ಬಿ,ಸಿ, ಡಿ – ಬಾಸ್‌ಗಳೆಲ್ಲ ಪುರಾಣ ವೇಷ ತೊಟ್ಟು ಮಾಸ್ ಡೈಲಾಗ್ ಹೊಡೆಯುವುದರಲ್ಲಿಯೇ ಮೈಮರೆತಿದ್ದಾರೆ. ಹೆಸರಲ್ಲೇ ಕಿಚ್ಚು ಇಟ್ಟುಕೊಂಡವರ ನೆತ್ತಿಮೇಲೂ ಯಾರೋ ತಣ್ಣೀರು ಸುರಿದಂತಿದೆ. ಚಿತ್ರರಂಗದ ಒಬ್ಬನೇ ಒಬ್ಬನೂ ಸುತ್ತಲಿನ ಸಮಾಜದಲ್ಲಿ ನಡೆಯುತ್ತಿರುವ ಆತಂಕಕಾರಿ ವಿದ್ಯಮಾನಕ್ಕೂ ತನಗೂ ಸಂಬಂಧವೇ ಇಲ್ಲ ಎಂಬಂತಿರುವುದು ನಮ್ಮ ಚಿತ್ರರಂಗದ ಚಿಂತನೆಯ ಮಟ್ಟವನ್ನೂ ಸೂಚಿಸುವಂತಿದೆ.



ಗಮನ ಕೇಂದ್ರೀಕೃತವಾಗಿದೆ. ಕೈಯಲ್ಲಿ ಪಿಸ್ತೂಲು ಹಿಡಿದು ನಿಂತಿರುವ 'ಶ್ರೀಮನ್ನಾರಾಯಣ'ನ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ. ಈ ಚಿತ್ರವೂ ಐದು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಕಳೆದ ವರ್ಷ ಕೆಜಿಎಫ್ ಕಮಾಲ್ ಮಾಡಿದ ಹಾಗೆ ಈ ಸಲ ಶ್ರೀಮನ್ನಾರಾಯಣನ ತನ್ನ ಲೀಲೆ ತೋರಿಸಲಿದ್ದಾನೆಯೇ ಎಂಬ ನಿರೀಕ್ಷೆಯಲ್ಲಿ ವರ್ಷದ ಕೊನೆಯ ಮೆಟ್ಟಿಲ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ.

### ದೂಳಿಲ್ಲದ ಸುರಳೀತ ಪ್ರಯಾಣ

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಚಂದನವನದಲ್ಲಿ ಎದ್ದ ವಿವಾದಗಳೂ ಕಮ್ಮಿಯೇ. ದರ್ಶನ್ ಮತ್ತು ಸುದೀಪ್ ಮಧ್ಯೆ ನಡೆದ ಟ್ವೀಟ್ ಚಕಮಕಿ ಅವರ ಆಲೋಚನೆಯ ಮಟ್ಟವನ್ನು ಇನ್ನೊಮ್ಮೆ ಸಾಬೀತುಗೊಳಿಸಿತು. ಕಿರುತೆರೆಯ ಜನಪ್ರಿಯ ಜೋಡಿ ರಮೇಶ್ ಇಂದಿರಾ ಮತ್ತು ಶ್ರುತಿ ನಾಯ್ಡು ಹಿರಿತೆರೆಗೆ ಬರುವ ಉಮೇದಿನಲ್ಲಿ ಕತೆಗಾರ ವಸುಧೇಂದ್ರ ಅವರ ಕೃತಿಯನ್ನು ಕದ್ದು ಸಿನಿಮಾ ಮಾಡಿ ಸಿಕ್ಕಿಬಿದ್ದಿದ್ದೂ ಒಮ್ಮೆ ಗುಲ್ಲಾಗಿ ತಣ್ಣಗಾಯಿತು. ಮೌನೇಶ ಬಡಿಗೇರ ನಿರ್ದೇಶನದ 'ಸೂಜಿದಾರ' ಸಿನಿಮಾದಲ್ಲಿ ನಟಿಸಿ ತಪ್ಪು ಮಾಡಿದೆ ಎಂಬರ್ಥದ ಮಾತುಗಳನ್ನು ನಾಯಕಿ ಹರಿಪ್ರಿಯಾ ಹೇಳಿದರು. ಅವರ ಮಾತು ಚಿತ್ರದ ಸೋಲಿಗೆ ಕಾರಣವಾಯ್ತು ಎಂದು ಚಿತ್ರತಂಡ ವಾಣಿಜ್ಯ ಮಂಡಳಿಯ ಮೆಟ್ಟಿಲೇರಿತು. ಈ ವಿವಾದ ಚೈತ್ರಾ ಕೋಟೂರ್ ಅವರಿಗೆ ಬಿಗ್ ಬಾಸ್ ಮನೆಯಲ್ಲಿ ಪ್ರವೇಶ ಕೊಡಿಸುವುದಕ್ಕಿಂತ ಹೆಚ್ಚಿನ ಪರಿಣಾಮವನ್ನೇನೂ ಉಂಟು ಮಾಡಲಿಲ್ಲ.

ಡಬ್ಬಿಂಗ್ ಚಿತ್ರಗಳು ಹೆಚ್ಚು ಗಟ್ಟಿಯಾಗಿ ಸ್ಥಾಪಿತಗೊಂಡ ವರ್ಷವಿದು. ಈ ಮೊದಲು ಡಬ್ಬಿಂಗ್ ವಿರೋಧಿಸಿ ಅಬ್ಬರಿಸಿದ್ದ ಸ್ಟಾರ್‌ಗಳೇ ಈಗ ಡಬ್ಬಿಂಗ್ ಸಿನಿಮಾಗಳ ಮುಂದೆ ಮಂಡಿಯೂರಿ ಪ್ರಚಾರಕ್ಕೆ ನಿಂತಿದ್ದಕ್ಕೆ ಈ ವರ್ಷ ಸಾಕ್ಷಿಯಾಯಿತು. 'ಡಿಯರ್ ಕಾಮ್ರೆಡ್' ಸಿನಿಮಾ ಪ್ರಚಾರಗೋಷ್ಠಿಯ ವೇದಿಕೆಯ ಮೇಲೆ ಯಶ್ ನಗುನಗುತ್ತ ಗಡ್ಡನೀವಿಕೊಂಡರು. ಡಬ್ಬಿಂಗ್ ವಿರುದ್ಧ ಹಿಂದೊಮ್ಮೆ ವೀರಾವೇಶದಿಂದ ಅಬ್ಬರಿಸಿದ್ದ ಸುದೀಪ್ ಅಭಿನಯದ ಮೂರು ಡಬ್ಬಿಂಗ್ ಸಿನಿಮಾಗಳು ಕನ್ನಡದಲ್ಲಿ ತೆರೆಕಂಡವು.

ಸಂಖ್ಯೆಯ ದೃಷ್ಟಿಯಿಂದಲೂ ಈ ವರ್ಷ ಕಳೆದ ವರ್ಷದ ಗಡಿಯನ್ನು ದಾಟಲು ಸಾಧ್ಯವಾಗಿಲ್ಲ. ಇದುವರೆಗೆ ಸುಮಾರು 210 ಸಿನಿಮಾಗಳು ಬಿಡುಗಡೆಯಾಗಿವೆ. ವರ್ಷದ ಒಟ್ಟು ಚಿತ್ರಗಳ ಸಂಖ್ಯೆ 220 ದಾಟುವ ಸಾಧ್ಯತೆಗಳಿಲ್ಲ. ಒಟ್ಟಾರೆ ಸಿನಿಮಾಗಳ ದೃಷ್ಟಿಯಿಂದಲೂ ಸಿನಿಮೇತರ ಕಾರಣಗಳಿಂದಲೂ ಚಿತ್ರರಂಗದ ಈ ವರ್ಷ ತುಸು ಬೋರಾಗಿಯೇ ಮುಗಿಯುತ್ತಿದೆ. ಚಿತ್ರಮಂದಿರಗಳ ಸಮಸ್ಯೆ, ಸಾಲು ಸಾಲು ಚಿತ್ರಗಳ ಬಿಡುಗಡೆ, ಪ್ರಯೋಗಾತ್ಮಕ ಚಿತ್ರಗಳ ಕೊರತೆ, ಶೇ. 5 ದಾಟದ ವಾಣಿಜ್ಯಾತ್ಮಕ ಗೆಲುವಿನ ಪ್ರಮಾಣ, ವಾಣಿಜ್ಯಮಂಡಳಿಯ ನಿಷ್ಕ್ರಿಯತೆ ಈ ಎಲ್ಲ ಸಮಸ್ಯೆಗಳೂ ಹಾಗೆಯೇ ಇವೆ. ಮತ್ತೊಂದು ವರ್ಷ ಮುಗಿದು ಹೋಗಿದೆ.

'ಚಂದನವನ'ವೆಂಬ ಐರಾವತ ಏರಿದ್ದ ಪ್ರೇಕ್ಷಕ ಪ್ರಯಾಣಿಕ ಗಮ್ಯದಲ್ಲಿ ಇಳಿದು ಮತ್ತೆ ಬಸ್ ಮೇಲಿನ ಮಗುವಿನ ಜಾಹೀರಾತು ನೋಡಿ ಪ್ರಯಾಣದ ಕಷ್ಟವನ್ನೆಲ್ಲ ಕ್ಷಣಕಾಲ ಮರೆತು ಮುದಗೊಳ್ಳುತ್ತಿದ್ದಾನೆ. ನಿದ್ದೆಗೆಟ್ಟ ಕಣ್ಣನ್ನು ಮತ್ತೊಮ್ಮೆ ಉಜ್ಜಿಕೊಂಡು ಓದಿಕೊಳ್ಳುತ್ತಿದ್ದಾನೆ: 'ಸ್ಲೀಪ್ ಲೈಕ್ ಎ ಬೇಬಿ'

ಪ್ರತಿಕ್ರಿಯಿಸಿ: feedback@sudha.co.in